ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ – 580025
ದೂರವಾಣಿ ಸಂಖ್ಯೆ : 0836–2222392, ಫ್ಯಾಕ್ಸ್ : 0836–2223392

ಸಂಖ್ಯೆ: ಕರಾಕಾವಿ/ಆಡಳಿತ/2016–17/ – 0667 ದಿನಾಂಕ:15–07–2016

## ಅಧಿಸೂಚನೆ

**ವಿಷಯ** : ವಿಶ್ವವಿದ್ಯಾಲಯದ ಹಣಕಾಸು ಸಮಿತಿ (Finance Committee) ರಚನೆ ಮಾಡುವ ಕುರಿತು.

**ಉಲ್ಲೇಖ** : 1. ದಿನಾಂಕ : 31–5--2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯ ನಡುವಳಿ (ವಿಷಯ ಸಂಖ್ಯೆ: 29)

2. ಮಾನ್ಯ ಕುಲಪತಿಗಳ ಪತ್ರದ ಸಂಖ್ಯೆ : KSLU/VCS/2016-17 ದಿನಾಂಕ : 11–7–2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ–2009ರ ಕಲಂ 28(ಇ)ನೇದರೊಂದಿಗೆ ಕಲಂ 39ರನ್ವಯ ಓದಿಕೊಳ್ಳಲಾಗಿ ವಿಶ್ವವಿದ್ಯಾಲಯದ ಹಣಕಾಸು ವಿಷಯಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ನಿರ್ವಹಿಸಲು **ಹಣಕಾಸು ಸಮಿತಿ(Finance Committee)**ಯನ್ನು ಪುನರ್‌ರಚಿಸಲು ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯಲ್ಲಿ ಉಲ್ಲೇಖ 1ರಡಿ ನಮೂದಿಸಿದಂತೆ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಸದರ ಸಮಿತಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನು ಗೊತ್ತುಮಾಡಲು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸೂಚಿಸಿದಂತೆ ಮಾನ್ಯ ಕುಲಪತಿಗಳು ಉಲ್ಲೇಖ 2ರಡಿ ನಮೂದಿಸಿದ ತಮ್ಮ ಪತ್ರದಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರನ್ನು ನಮೂದಿಸಿರುತ್ತಾರೆ. ಕಾರಣ ಆ ಮೇರೆಗೆ **ಹಣಕಾಸು ಸಮಿತಿ (Finance Committee)**ಯನ್ನು ಈ ಕೆಳಗಿನಂತೆ ಪುನರ್‌ರಚಿಸಿದೆ.

### ಹಣಕಾಸು ಸಮಿತಿ (Finance Committee)

| ಅ.ನಂ. | ಹೆಸರು | ಪದನಾಮ |
|---|---|---|
| 1. | ಕುಲಪತಿಗಳು | ಅಧ್ಯಕ್ಷರು |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಕರ್ನಾಟಕ ಸರ್ಕಾರರವರ ಪ್ರತಿನಿಧಿ (ಅಪರ ಕಾರ್ಯದರ್ಶಿಗಳಿಗಿಂತ ಕಡಿಮೆ ಇರದ ಹುದ್ದೆ ಹೊಂದಿದವರು) | ಸದಸ್ಯರು |
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆರವರ ಪ್ರತಿನಿಧಿ (ಉಪ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇರದ ಹುದ್ದೆ ಹೊಂದಿದವರು) | ಸದಸ್ಯರು |

18/7/16

| | | | |
|---|---|---|---|
| 4. | ಸಿಂಡಿಕೇಟ್ ನಾಮನಿರ್ದೇಶನ ಮಾಡಲ್ಪಟ್ಟ ಎರಡು ಜನ ಸದಸ್ಯರು | | |
| | 1. | ಡಾ. ಸಿ. ಎಸ್. ಪಾಟೀಲ (ವಿಶ್ವವಿದ್ಯಾಲಯದ ಪ್ರಾಧ್ಯಾಪಕರು) | ಸದಸ್ಯರು |
| | 2. | ಶ್ರೀಮತಿ ಮರಿಚೆನ್ನಮ್ಮ, (ಸಿಂಡಿಕೇಟ್ ಸದಸ್ಯರು) | ಸದಸ್ಯರು |
| 5. | ಶ್ರೀಮತಿ ಎ. ಜಿ. ಆಶಾ, (ಪ್ರಶಿಕ್ಷಣ ಪರಿಷತ್ ಸಮಿತಿಯ ನಾಮನಿರ್ದೇಶಿತ ಸದಸ್ಯರು) | | ಸದಸ್ಯರು |
| 6. | ಕುಲಸಚಿವರು | | ಸದಸ್ಯರು |
| 7. | ಹಣಕಾಸು ಅಧಿಕಾರಿಗಳು | | ಕಾರ್ಯದರ್ಶಿಗಳು |

ಸದರ ಸಮಿತಿಯು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದು ಹಾಗೂ ಸಮಿತಿಯ ಕಾರ್ಯಾವಧಿಯು ಸಿಂಡಿಕೇಟ್ ಸಮಿತಿಯ ಕಾರ್ಯಾವಧಿಗೆ ಸಮಾನಾಂತರವಾಗಿರುತ್ತದೆ.

ತಮ್ಮ ವಿಶ್ವಾಸಿ,

14/07/14

ಕುಲಸಚಿವರು

ಗೆ,

ಹಣಕಾಸು ಸಮಿತಿಯ ಎಲ್ಲ ಸದಸ್ಯರಿಗೆ

ಪ್ರತಿಯನ್ನು,

1. ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
2. ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರುಗಳಿಗೆ.
3. ಮುಖ್ಯಸ್ಥರು, ಐ.ಸಿ.ಟಿ. ವಿಭಾಗ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಳವಡಿಸಲು.
4. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
5. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಸಚಿವರ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.